# ಇಸ್ಲಾಮ್ ಧರ್ಮದ ಮಾನವೀಯ ಮೌಲ್ಯಗಳು

ಶಶಿಕಲಾ ಶ್ರೀಧರ್

*ಯಾವುದೇ ಧರ್ಮದ ಯಥಾರ್ಥ ರೂಪಕ್ಕೂ ಮತ್ತು ವಿಧರ್ಮೀಯರು ಅದನ್ನು ನೋಡುವ ವಿಕೃತರೂಪಕ್ಕೂ ಅದೆಷ್ಟು ವ್ಯತ್ಯಾಸ! ಇಸ್ಲಾಂ ಧರ್ಮದ ಯಥಾರ್ಥ ರೂಪವನ್ನು ಚಿತ್ರಿಸಿರುವ ಶ್ರೀಮತಿ ಶಶಿಕಲಾ ಶ್ರೀಧರ್ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.*

ಪ್ರಪಂಚದ ಅನೇಕ ಧರ್ಮಗಳಲ್ಲಿ ಇಸ್ಲಾಂ ಧರ್ಮವೂ ಒಂದು. ಇದು ಭರತಖಂಡಕ್ಕ ಕಾಲಿಟ್ಟು ಒಂದು ಸಾವಿರದ ಇನ್ನೂರು ವರ್ಷಗಳು ಸಂದಿವೆ. ಅರಬ್ಬೀ ಭಾಷೆಯಲ್ಲಿ ಇಸ್ಲಾಮ್ ಎಂದರೆ ವಿಧೇಯತೆ ಮತ್ತು ಅನುಸರಣೆ ಎಂದರ್ಥ. ಯಾರ ಬಗ್ಗೆ ವಿಧೇಯತೆ ಮತ್ತು ಯಾವುದರ ಅನುಸರಣೆ?

ದೊಡ್ಡ ದೊಡ್ಡ ಗ್ರಹಗಳಿಂದ ಹಿಡಿದು ಭೂಮಿಯ ಅತ್ಯಂತ ಸಣ್ಣ ಕಣದವರೆಗೆ ಎಲ್ಲ ವಸ್ತುಗಳೂ ಬಂಧಿತವಾಗಿರುವಂತಹ ಒಂದು ಬಲಿಷ್ಠ ನಿಯಮವಿದೆ. ಈ ಬಲಿಷ್ಠ ನಿಯಮದ ಹಿಂದೆ ಎಲ್ಲ ಧರ್ಮಗಳೂ ಒಪ್ಪುವ ಸರ್ವಶಕ್ತಿ ಸ್ವರೂಪ, ಸರ್ವಾಂತರ್ಯಾಮಿ ಎಂದು ಕೀರ್ತಿಸಲ್ಪಡುವ ಯಾವ ಒಂದು ಪರಮಶಕ್ತಿ ಇರುವುದೋ, ಯಾರನ್ನು ಹಿಂದೂಗಳು ಭಗವಂತನೆಂದೂ, ಕ್ರೈಸ್ತರು ಸ್ವರ್ಗದಲ್ಲಿರುವ ತಂದೆ ಎಂದೂ ಇಸ್ಲಾಂ ಧರ್ಮದವರು ಅಲ್ಲಾಹ್ ಎಂದೂ ಕರೆಯುವರೋ ಆ ದೇವದೇವನಲ್ಲಿ ವಿಧೇಯತೆ ಮತ್ತು ಅವನ ಸೃಷ್ಟಿಯ ನಿಯಮಗಳ ಅನುಸರಣೆ.

ವೇದಗಳು ಸಾರುವಂತೆ **ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ**—ಎಂದರೆ ಮಂಗಳಕರವಾದ ಸದ್ವಿಚಾರಗಳು ಎಲ್ಲೆಡೆಯಿಂದಲೂ ನಮಗೆ ಬರಲಿ. ಎಲ್ಲ ಧರ್ಮಗಳಲ್ಲೂ ಜೀವಿಗಳಿಗೆ ಬೇಕಾದ ಸದ್ವಿಚಾರಗಳು, ಸನ್ಮಾರ್ಗದರ್ಶನಗಳು ಉಂಟು. ಸಾಧಕನಾದವನು ಪೂರ್ವಗ್ರಹ ಪೀಡಿತನಾಗದೆ ತೆರೆದ ಬುದ್ಧಿ ಹೃದಯಗಳಿಂದ, ಎಲ್ಲ ಪುಷ್ಪಗಳಿಂದಲೂ ಮಧುಹೀರುವ ದುಂಬಿಗಳಂತೆ ಎಲ್ಲೆಡೆಯಿಂದಲೂ ಸದ್ವಿಚಾರಗಳನ್ನು ಗ್ರಹಿಸಿ ಉದಾರಚರಿತನಾಗಿ ವಸುಧೆಯೇ ತನ್ನ ಕುಟುಂಬ ಎಂಬ ವಿಶಾಲಭಾವದಿಂದ, ಭೂಮಿಯ ಮೇಲಿರುವ ಎಲ್ಲ ಚೇತನರೂ ಭಗವಂತನೆಂಬ ಸೂರ್ಯನ ಕಿರಣಗಳು ಎಂಬುದನ್ನು ಮನಗಂಡು, ಪರಸ್ಪರ ಆತ್ಮೀಯಭಾವದಿಂದ ಸಕಲರಿಗೂ ಶ್ರೇಯಸ್ಸನ್ನು ಕೋರುತ್ತಾ, ತನ್ನ ಜೀವಿತದ ಅಲ್ಪ ಕಾಲಾವಧಿಯನ್ನು ಭಗವಂತ ಮೆಚ್ಚುವ ರೀತಿಯಲ್ಲಿ ಬಾಳಿ ಅವನಿಗೆ ಅರ್ಪಿತಗೊಳಿಸಬೇಕು.

ಕ್ರೈಸ್ತ ಇಸ್ಲಾಂ ಧರ್ಮಗಳಲ್ಲೂ ಅವುಗಳದೇ ಆದ ವೈಶಿಷ್ಟ್ಯವಿದೆ. ಮೂಲದಲ್ಲಿ ಎಲ್ಲ ಗುರುಗಳೂ, ಆಚಾರ್ಯರೂ, ಪ್ರವಾದಿಗಳೂ ಅತ್ಯಂತ ಮಹತ್ವದ ವಿಚಾರಗಳನ್ನು ಉದಾರತೆಯಿಂದಲೂ, ಪರಮಕರುಣೆಯಿಂದಲೂ ಸಮಸ್ತ ಜೀವಕೋಟಿಗಳ ಕಲ್ಯಾಣಕ್ಕಾಗಿ ಮುಂದಿಟ್ಟಿದ್ದಾರೆ. ಆದರೆ ಕಾಲಚಕ್ರ ಉರುಳುತ್ತಾ ಸಾಗುವಾಗ ಆ ಮೂಲದ ವಿಚಾರಗಳು ಅನೇಕ ಬದಲಾವಣೆಗಳನ್ನು ಹೊಂದುತ್ತಾ ಕೆಲವೆಡೆ ತನ್ನ ಮೂಲದ ಉದ್ದೇಶವನ್ನೇ ಕಳೆದುಕೊಂಡು ಸಾಗಿರುವ ಪ್ರಸಂಗಗಳೂ ಇವೆ. ಅನ್ಯಮತ ಅಸಹಿಷ್ಣುತೆ, ಜೀವಿಗಳಲ್ಲಿ ಪರಸ್ಪರ ಘರ್ಷಣೆ, ಅವಿಶ್ವಾಸ, ತಪ್ಪು ತಿಳುವಳಿಕೆ ಇವುಗಳೆಲ್ಲ ಎದ್ದು, ಎಲ್ಲ ಧರ್ಮಗಳೂ ಒಂದೇ ತತ್ತ್ವವನ್ನು ಸಾರುತ್ತಿದ್ದರೂ "ನನ್ನ ಧರ್ಮ ಮೇಲು, ನಿನ್ನ ಧರ್ಮ ಕೀಳು" ಎಂದು ಒಡಕುಗಳನ್ನು ಉಂಟುಮಾಡುತ್ತಿವೆ. ಎಲ್ಲ ಧರ್ಮದ ಅನುಯಾಯಿಗಳು ಚರ್ಚೆ ಬಿಟ್ಟು ಆಧ್ಯಾತ್ಮಿಕ ಸಾಧನೆಗಿಳಿದರೆ ಈ ಎಲ್ಲ ಭಿನ್ನಾಭಿಪ್ರಾಯಗಳು ತಾವಾಗಿಯೇ ತೊಳೆದು ಹೋಗುತ್ತವೆ. ಹಾಗಿಲ್ಲದೆ ಬರಿಯ ಪಾಠಪ್ರವಚನಗಳಲ್ಲೇ ತೊಡಗಿದರೆ ವಸ್ತುವಿನ ವಾಸ್ತವಿಕತೆ ಇವರ ಪಾಲಿಗೆ ಎಲ್ಲ ಕಾಲಕ್ಕೂ ಎಟುಕದ ವಸ್ತುವಾಗಿಬಿಡುತ್ತದೆ.

"ಸತ್ಯದ ಅಸ್ತಿತ್ವದಲ್ಲಿ ಬಲವಾದ ವಿಶ್ವಾಸವಿಟ್ಟು ಅದರ ಅನುಸರಣೆ ಮಾಡಬೇಕು" ಎಂದು ಇಸ್ಲಾಂ ಧರ್ಮ ಸಾರುತ್ತದೆ. ಈ ಧರ್ಮದಲ್ಲಿರುವ ವಿಶ್ವದ ಎಲ್ಲ ಜೀವಿಗಳಿಗೂ ಸರಿಹೊಂದುವ ಅನೇಕ ಉದಾತ್ತ ವಿಚಾರಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಸ್ಮರಿಸೋಣ.

## ೧. ಸತ್ಯವಿಶ್ವಾಸ ಮತ್ತು ಅನುಕರಣೆ—ಈಮಾನ್

ಸಾಧಕನಾದವನಿಗೆ ಪ್ರಪ್ರಥಮವಾಗಿ ತನ್ನ ಸಾಧನೆಯ ಧ್ಯೇಯವಾದ ದೇವನ ಬಗ್ಗೆ ದೃಢವಿಶ್ವಾಸ ಇರಬೇಕು. ಏಕೆಂದರೆ ದೇವನ ಅಸ್ತಿತ್ವದ ಬಗ್ಗೆ ಪೂರ್ಣ ವಿಶ್ವಾಸವೆ ಇರದಿದ್ದ ಮೇಲೆ ಅವನ ಅನುಸರಣೆ ಮಾಡುವುದಾದರೂ ಹೇಗೆ ಸಾಧ್ಯ? ಭಗವಂತನ ಜ್ಞಾನ ಮತ್ತು ವಿಶ್ವಾಸವನ್ನೇ ಈಮಾನ್ ಎನ್ನುವರು. ಈಮಾನ್ ಎಂದರೆ ಅರಿಯುವುದು ಮತ್ತು ಅಂಗೀಕರಿಸುವುದು ಎಂದರ್ಥ.

## ೨. ಸತ್ಯಮಾರ್ಗದರ್ಶಕರು—ನಬಿ ಅಥವಾ ರಸೂಲ್

ಯಾವ ದೇವನು ಮನುಷ್ಯನ ಅತಿ ಸಣ್ಣ ಅಗತ್ಯಗಳನ್ನು ಪೂರೈಸುವ ವ್ಯವಸ್ಥೆ ಮಾಡಿರುವನೋ, ಅವನು ಜೀವಿಯ ಶಾಶ್ವತ ಯಶಸ್ಸೆಂಬ ಮಹತ್ವದ ಅಗತ್ಯವನ್ನು ಪೂರ್ಣಗೊಳಿಸಲು

ಮಾಡಬೇಕಾದ ವ್ಯವಸ್ಥೆಯನ್ನು ಮರೆತಿಲ್ಲ. ಸೃಷ್ಟಿಕರ್ತನನ್ನು ಗುರುತಿಸುವ ವಿಶಿಷ್ಟ ಸಾಮರ್ಥ್ಯವಿರುವ ಮನುಷ್ಯನನ್ನು ಸೃಷ್ಟಿಸಿದ್ದಾನೆ. ಇವರೇ ದೇವಸಂದೇಶವಾಹಕರು ಅಥವಾ ಪ್ರವಾದಿಗಳು. ಈ ಇಸ್ಲಾಂಗುರುಗಳ ಪ್ರಕೃತಿಯು ಅತ್ಯಂತ ಪರಿಶುದ್ಧವಾಗಿರುತ್ತದೆ. ಅವರು ಯಾವಾಗಲೂ ಸತ್ಯ, ನ್ಯಾಯ, ಮಾನವೀಯತೆ ಮತ್ತು ಸಭ್ಯತೆಗಳ ಮಾರ್ಗವನ್ನೇ ಅನುಸರಿಸುತ್ತಾರೆ. ಇಂತಹ ಸದ್ಗುಣಗಳುಳ್ಳ ರಸೂಲ್‌ಗಳ ಮೇಲೆ ಪೂರ್ಣ ಭರವಸೆ ಇಟ್ಟು ಅವರ ಪ್ರತಿಯೊಂದು ಆಜ್ಞೆಯನ್ನೂ ಶಿರಸಾವಹಿಸಿ ಪಾಲಿಸಬೇಕು.

### ೩. ದೇವನ ಆರಾಧನೆ, ಅವನಲ್ಲಿ ದಾಸ್ಯ—ಇಬಾದತ್

ನಾವು ದಾಸರು. ದೇವರು ನಮ್ಮ ಆರಾಧ್ಯ. ದಾಸನು ತನ್ನ ಆರಾಧ್ಯನ ಅನುಸರಣೆಯಲ್ಲಿ ಮಾಡುವುದೆಲ್ಲವೂ ಇಬಾದತ್ ಆಗಿದೆ. ಸುಳ್ಳು, ಪರನಿಂದೆ ಮತ್ತು ಅಶ್ಲೀಲ ಮಾತುಗಳಿಂದ ದೂರವಿರುವುದು, ಸತ್ಯ ಮತ್ತು ಪರಿಶುದ್ಧ ಮಾತುಗಳನ್ನೇ ಆಡುವುದು, ಜೀವನದ ಎಲ್ಲ ವ್ಯವಹಾರಗಳನ್ನು ಪ್ರಾಮಾಣಿಕವಾಗಿ, ದೇವನ ಪ್ರೀತ್ಯರ್ಥ ಮಾಡುತ್ತಿದ್ದರೆ ಆ ಕಾರ್ಯಗಳೆಲ್ಲವೂ ಇಬಾದತ್ ಎನಿಸುವುದು. ಇಬಾದತ್‌ನ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಜನಾಂಗಕ್ಕೂ ಅದರದರ ಸಂಸ್ಕೃತಿ ಸಭ್ಯತೆ ಮತ್ತು ನೈತಿಕತೆಯ ಶಿಕ್ಷಣ ನೀಡಲು ಅಲ್ಲಾಹನು ವಿಭಿನ್ನ ಶರೀಅತ್‌ಗಳನ್ನು ಕಳುಹಿಸಿದ್ದನೆಂದೂ ಇವುಗಳಲ್ಲಿ ಅಂತಿಮವಾದುದು ಪ್ರವಾದಿ ಮಹಮ್ಮದ್ (ಸ) ಅವರ ಶರೀಅತ್ ನಿಯಮಗಳೆಂದೂ ಹೇಳುತ್ತಾರೆ. ಈ ಉತ್ತಮ ಉದಾತ್ತ ನಿಯಮಗಳುಳ್ಳ ಎರಡು ಮೂಲ ಕೃತಿಗಳು ಕುರಾನ್ ಮತ್ತು ಹದೀಸ್. ಕುರಾನ್‌ನ ಶಬ್ದಾರ್ಥ ಓದುವುದು ಎಂದಾಗಿದೆ. ಹದೀಸ್ ಎಂದರೆ ಜನರ ಬಳಿ ತಲುಪಿರುವಂತಹ ಪ್ರವಾದಿವರ್ಯರ ವಚನಗಳು.

### ೪. ಏಕದೇವ ವಿಶ್ವಾಸ—ತೌಹೀದ್

ಇಸ್ಲಾಂ ಧರ್ಮದಲ್ಲಿ ಅತಿ ಮುಖ್ಯವಾದುದು ಏಕದೇವ ವಿಶ್ವಾಸ. ಜಗತ್ತಿನ ಸೃಷ್ಟಿಕರ್ತನಾಗಿ ಅದರ ಒಡೆತನ ಮತ್ತು ಅಧಿಪತ್ಯವನ್ನು ವಹಿಸಿ, ಎಲ್ಲರನ್ನೂ ಪರಿಪಾಲಿಸುವ ಪರಮಾತ್ಮನನ್ನು ಅಲ್ಲಾಹ್ ಎಂದು ಇಸ್ಲಾಂ ಧರ್ಮ ಕರೆಯುತ್ತದೆ. ಈ ಏಕದೇವತಾ ನಿಷ್ಠೆ ಯಾವುದೇ ಧರ್ಮದ ಜಿಜ್ಞಾಸುವಿಗೆ, ಸಾಧಕನಿಗೆ ಅತ್ಯಗತ್ಯ. ತನ್ನ ಇಷ್ಟದೇವತೆಯ ಬಗ್ಗೆ ಸಂಪೂರ್ಣ ವಿಶ್ವಾಸವಿಟ್ಟು ಸಾಧನೆಯಲ್ಲಿ ಆಳವಾಗಿ ಮುಳುಗಿದರೆ ಮಾತ್ರ ಭಗವದನುಭವವೆಂಬ ಸಾಗರದ ಆಳದಲ್ಲಿರುವ ಮುತ್ತು ಮಾಣಿಕ್ಯಗಳು ಗೋಚರವಾಗುವುವು. ಮೇಲೆ ಮೇಲೇ ತೇಲುತ್ತಿದ್ದರೆ, ಏನೂ ದೊರಕದು. ನೀರಿಗಾಗಿ ಬಾವಿ ತೋಡುವಾಗ ಹತ್ತು ಕಡೆ ತೋಡದೆ ಒಂದೇ ಕಡೆ ಆಳವಾಗಿ ತೋಡಿದರೆ ಮಾತ್ರ ನೀರು ಸಿಗುವುದಲ್ಲವೇ? ಎಲ್ಲ ದೇವರೂ ಒಂದೇ. ಅವನನ್ನು ಸೇರಲು ಅನೇಕ ಪಥಗಳಿವೆ. ದೇವನೊಬ್ಬ, ನಾಮ ಹಲವು. ಶ್ರೀರಾಮಕೃಷ್ಣರು ಹೇಳುವಂತೆ ನೀರನ್ನು ಪಾನಿ, ವಾಟರ್, ಅಕ್ವಾ, ವಾರಿ, ಜಲ ಎಂದು ಬೇರೆ ಬೇರೆ ಹೆಸರುಗಳಿಂದ ಕರೆದರೂ ನೀರು ಒಂದೇ. ಇದರಂತೆಯೇ ಅಲ್ಲಾಹ್, ಗಾಡ್, ಈಶ್ವರ, ಪರಮಾತ್ಮ ಮಹಾವಿಷ್ಣು ಎಂಬ ನಾನಾ ಹೆಸರುಗಳಿಂದ ಕರೆದರೂ ಕರೆಯುತ್ತಿರುವುದು ತನ್ನನ್ನೇ ಎಂದು ಆ ದೇವದೇವನಿಗೆ ಸ್ಪಷ್ಟವಾಗಿ ತಿಳಿದಿರುವುದಲ್ಲವೇ? ಆದ್ದರಿಂದ ಪರಮಪದ ಸೋಪಾನಗಳಲ್ಲಿ ಪ್ರಥಮ ಸೋಪಾನ ಈ ಏಕದೇವತಾ ನಿಷ್ಠೆ.

### ೫. ಪರಲೋಕ ವಿಶ್ವಾಸ — ಆಖಿರತ್ ಪರ್ ಈಮಾನ್

ಇಸ್ಲಾಮ್ ಧರ್ಮದ ಪ್ರಕಾರ ಮನುಷ್ಯಜೀವನವು ಲಭಿಸಿರುವುದು ಅವನ ಪರೀಕ್ಷಾರ್ಥವಾಗಿ. ಅವನು ತನ್ನ ಸೃಷ್ಟಿಕರ್ತನನ್ನು ಸ್ಮರಿಸುತ್ತಾ ಸಂಯಮದ ಜೀವನ ನಡೆಸುತ್ತಾ ಅವನ ಆರಾಧನೆ ಮಾಡುತ್ತಾನೆಯೋ ಅಥವಾ ತನ್ನ ದುಷ್ಟ ಚಿಂತನೆಗಳಿಗೆ ಬಲಿಯಾಗಿ ಸ್ವೇಚ್ಛಾಚಾರಿಯ ಬಾಳು ನಡೆಸುತ್ತಾನೆಯೋ ಎಂಬುದನ್ನು ಪರೀಕ್ಷಿಸುವ ತಾಣ ಈ ಜೀವನ. ಕುರಾನಿನ ನುಡಿಗಳಲ್ಲೇ ಹೇಳುವುದಾದರೆ "ನಿಮ್ಮಲ್ಲಿ ಯಾರು ಅತ್ಯುತ್ತಮ ಕರ್ಮಗಳನ್ನು ಮಾಡುತ್ತಾರೆ ಎಂಬುದನ್ನು ಪರೀಕ್ಷಿಸುವ ಸಲುವಾಗಿ ಅವನೇ ಜನನ ಮರಣಗಳನ್ನು ಸೃಷ್ಟಿಸಿದನು"(೬೭:೨). ಆದುದರಿಂದ ಜೀವಿಗಳಿಗೆ ಐಹಿಕ ಜೀವನದ ವಾಸ್ತವಿಕತೆ ಮುಖ್ಯವಾದುದು. 'ನಿನ್ನೆ' ಎಂಬುದು ಕಳೆದುಹೋದ ಕಥೆ. 'ನಾಳೆ' ಎಂಬುದು ನಮ್ಮ ನಿಯಂತ್ರಣದಲ್ಲಿಲ್ಲ. 'ಇಂದು' ಮಾತ್ರ ವಾಸ್ತವಿಕ ಸತ್ಯ. ಅದು ಮಾತ್ರ ನಮ್ಮ ಕೈಯಲ್ಲಿದೆ. ಅದನ್ನು ಅರ್ಥಪೂರ್ಣವಾಗಿ ಕಳೆದರೆ ಮಾತ್ರ ಬಾಳು ಸಾರ್ಥಕವಾಗುತ್ತದೆ. ಇದರಂತೆಯೇ ಹಿಂದಿನ ಜನ್ಮ ನಮಗೆ ನೆನಪಿಲ್ಲ, ಮುಂದಿನ ಜನ್ಮ ನಮಗೆಟುಕದ ವಿಷಯ. ಆದ್ದರಿಂದ ಈ ಜನ್ಮದಲ್ಲಿ ಸತ್ಯಮಾರ್ಗದಲ್ಲಿ ನಡೆದು, ಸಾಧನೆಗೈದು ಭಗವತ್ಪ್ರಾಪ್ತಿಯನ್ನು ಹೊಂದಬೇಕಾದುದು ನಮ್ಮ ಕರ್ತವ್ಯ. ಮೋಕ್ಷಪ್ರಾಪ್ತಿಗಾಗಿ ದೇವತೆಗಳೂ ಮಾನವ ಜನ್ಮ ಪಡೆದು ಬರಬೇಕು. ಹಾಗಿರುವಾಗ ಸುಕೃತವಶಾತ್ ನಾವು ಮಾನವ ಜನ್ಮವನ್ನು ಪಡೆದೂ, ಮೋಕ್ಷಕ್ಕಾಗಿ ಪ್ರಯತ್ನಿಸದಿದ್ದರೆ ನಮಗಿಂತ ದುರದೃಷ್ಟವಂತರು ಬೇರಿಲ್ಲ.

ಇಸ್ಲಾಂ ಧರ್ಮದ ಪ್ರಕಾರ ಈ ಲೋಕದಲ್ಲಿ ಸತ್ಯದ ಮೇಲೆ ವಿಶ್ವಾಸವಿರಿಸುತ್ತಾ ಸತ್ಕರ್ಮಗಳನ್ನು ಮಾಡುತ್ತಾ ಜೀವಿಸಿದವನು ಭಗವಂತನ ನ್ಯಾಯಾಲಯದಲ್ಲಿ ಅವನ ನಿರ್ಣಾಯಕ ದಿನದಂದು ವಿಜಯಿಯಾಗುವನು. ಪ್ರತಿಯೊಬ್ಬ ಮಾನವನೂ ನಿಷ್ಕಳಂಕವಾದ ಬೌದ್ಧಿಕ ಮತ್ತು ಶಾರೀರಿಕ ಸಾಮರ್ಥ್ಯಗಳೊಂದಿಗೆ ಹುಟ್ಟುತ್ತಾನೆ. ಬೆಳೆಯುವಾಗ ದೇವನೆಡೆಗೆ ಹೋಗುವ ಮಾರ್ಗಗಳಿಗನುಸಾರವಾಗಿ ಈ ಸಾಮರ್ಥ್ಯಗಳನ್ನು ಉಪಯೋಗಿಸಿಕೊಳ್ಳಬೇಕು.

### ೬. ಸಾಮೂಹಿಕ ಪ್ರಾರ್ಥನೆ—ನಮಾಝ್

ಇಸ್ಲಾಂ ಧರ್ಮವು ಪ್ರಾರ್ಥನೆಗೆ ಅತ್ಯಂತ ಪ್ರಾಮುಖ್ಯ ಕೊಟ್ಟಿದೆ. ದಿನಕ್ಕೆ ಐದುಬಾರಿ ಮಸೀದಿಯಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುತ್ತಾರೆ. ಯಾವುದೇ ಧರ್ಮದಲ್ಲಾಗಲಿ ಸಾಧನೆ ಪ್ರಾರಂಭವಾಗುವುದು ಪ್ರಾರ್ಥನೆಯಿಂದಲೇ ಅಲ್ಲವೇ? ಮುಸಲ್ಮಾನರು ಕುರಾನಿನ ಪೀಠಿಕಾರೂಪದಲ್ಲಿ ಬರುವ ಪ್ರಥಮ ಅಧ್ಯಾಯವನ್ನು ಪಠಿಸುತ್ತಾ "ಪರಮದಯಾಮಯನಾದ, ಕರುಣಾ

ನಿಧಿಯಾದ ದೇವನಿಗೇ (ಅಲ್ಲಾಹನಿಗೇ) ಸರ್ವಸ್ತುತಿ. ಅವನು ಸಕಲ ವಿಶ್ವದ ಪ್ರಭು. ಅವನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ಅವನಿಂದ ಮಾತ್ರ ಸಹಾಯ ಬೇಡುತ್ತೇವೆ, ಸನ್ಮಾರ್ಗವನ್ನು ತೋರಿಸಲು ಪ್ರಾರ್ಥಿಸುತ್ತೇವೆ" ಎಂಬುದಾಗಿ ನಮಾಝ್ ಮಾಡುತ್ತಾರೆ. ಈ ಪ್ರಾರ್ಥನೆ ಎಲ್ಲರನ್ನೂ ಅಶ್ಲೀಲ ಕಾರ್ಯಗಳಿಂದ ಮತ್ತು ಕೆಡುಕಿನಿಂದ ತಡೆಯುತ್ತದೆ ಎಂಬುದು ಅವರ ನಿಶ್ಚಲ ನಂಬಿಕೆ.

### ೭. ಸಿರಿವಂತರ ಸೊತ್ತು ಬಡವರ ಹಕ್ಕು—ಝಕಾತ್

ಝಕಾತ್ ಎಂಬುದು ನಮಾಝ್ ಪ್ರಾರ್ಥನೆಯಂತೆಯೇ ಒಂದು ವಿಧಿ. ಇದೂ ದೇವನ ಆರಾಧನೆ. ಪ್ರತಿಯೊಬ್ಬ ಸಿರಿವಂತ ಮುಸಲ್ಮಾನನು ತನ್ನ ಸಂಪತ್ತಿನ ಒಂದಂಶವನ್ನು ಪ್ರತಿವರ್ಷ ಬಡವರಿಗೆ, ಪ್ರಯಾಣಿಕರಿಗೆ, ಸಾಲಗಳಲ್ಲಿ ಮುಳುಗಿರುವವರಿಗೆ ಮತ್ತು ಧರ್ಮಕಾರ್ಯಗಳಿಗೆ ಕಡ್ಡಾಯವಾಗಿ ನೀಡಲೇಬೇಕು. ಝಕಾತ್ ದಾನವಲ್ಲ, ಭಿಕ್ಷೆಯಲ್ಲ. ಅದು ಬಡವರ ಹಕ್ಕಾಗಿದೆ. ಇದರ ಬಗ್ಗೆ ಕುರಾನ್ ಈ ರೀತಿ ಹೇಳುತ್ತದೆ: "ಸಿರಿವಂತರ ಸೊತ್ತಿನಲ್ಲಿ ನಿಶ್ಚಯವಾಗಿಯೂ ಅಪೇಕ್ಷಿತರ ಮತ್ತು ಜೀವನಾವಶ್ಯಕತೆಗಳಿಂದ ವಂಚಿತರಾದವರ ಹಕ್ಕಿದೆ"(೭೦:೨೪-೨೫). ಇಲ್ಲಿ ಸಿರಿವಂತರು ಬಡವರನ್ನು ಗುರುತಿಸಿ ತಾವೇ ಅವರಿಗೆ ಧನವನ್ನು ತಲುಪಿಸುವ ವ್ಯವಸ್ಥೆ ಮಾಡಬೇಕು. ಬಡವರು ಇವರ ಮನೆಯ ಬಾಗಿಲನ್ನು ಕಾಯಕೂಡದು. ಪ್ರವಾದಿ ಮಹಮ್ಮದ್ (ಸ)ರವರು ಹೇಳುತ್ತಾರೆ, "ಕೊಡುವ ಕೈ ಪಡೆಯುವ ಕೈಗಿಂತ ಉತ್ತಮವಾದುದು" ಎಂದು.

### ೮. ಧರ್ಮಸ್ಥಾಪನೆಗೆ ಹೋರಾಟ—ಜಿಹಾದ್

ಜಿಹಾದ್ ಎಂದರೆ ಧರ್ಮವನ್ನು ಬಲಾತ್ಕಾರವಾಗಿ ಹೇರಲು ಮಾಡುವ ಯುದ್ಧವಲ್ಲ. ಧರ್ಮದಲ್ಲಿ ಯಾವುದೇ ಒತ್ತಾಯವಾಗಲೀ ಬಲಾತ್ಕಾರವಾಗಲೀ ಇರಕೂಡದೆಂದು ಕುರಾನ್ ಸಾರಿದೆ (೨:೨೫೬). ಹಾಗಾದರೆ ಜಿಹಾದ್ ಯಾವಾಗ ನಡೆಯಬೇಕು? ಮನುಷ್ಯನ ಮೂಲಭೂತ ಸ್ವಾತಂತ್ರ್ಯ ಕಸಿಯಲ್ಪಟ್ಟಾಗ ಅಥವಾ ಶಾಂತಿಯುತ ಧರ್ಮಪ್ರಚಾರ ಕಾರ್ಯಗಳು ಹಿಂಸಾಮಾರ್ಗದಿಂದ ತಡೆಯಲ್ಪಟ್ಟಾಗ ಇದರ ವಿರುದ್ಧ ಯುದ್ಧಮಾಡಲು ಅನುಮತಿ ಇದೆ. ಆದರೆ ಶಾಂತಿ ಸಂಧಾನಗಳಿಗೆ ಸಿದ್ಧವಿರುವವರೊಡನೆ ಯುದ್ಧ ಮಾಡಬಾರದು. ಯುದ್ಧಮಾಡುವಾಗ ಸ್ತ್ರೀಯರ, ಮಕ್ಕಳ, ವೃದ್ಧರ ಹಾಗೂ ಗಾಯಗೊಂಡವರ ಮೇಲೆ ಕೈಮಾಡಬಾರದು ಎಂಬ ಕಟ್ಟಾಜ್ಞೆಯನ್ನು ಇಸ್ಲಾಂ ಧರ್ಮ ವಿಧಿಸಿದೆ. ದುಷ್ಪ್ರವೃತ್ತಿಗಳ ವಿರುದ್ಧ ಹೋರಾಟ ಎಂಬ ಅರ್ಥವೂ ಈ ಶಬ್ದಕ್ಕೆ ಇದೆ.

### ೯. ಪರಧರ್ಮ ಸಹಿಷ್ಣುತೆ—ಮಝುಹಬಿ ರವಾದಾರಿ

ಧರ್ಮದ ವಿಷಯದಲ್ಲಿ ಬಲಾತ್ಕಾರದಿಂದಾಗಲಿ, ವಂಚನೆಯಿಂದಾಗಲಿ ಯಾರನ್ನೂ ಮತಾಂತರಗೊಳಿಸುವ ಹಕ್ಕನ್ನು ಇಸ್ಲಾಂ ಧರ್ಮ ನೀಡುವುದಿಲ್ಲ. ಯಾರೇ ಆಗಲಿ ಅವರವರ ಧರ್ಮವನ್ನು



ಇಸ್ಲಾಂ ಧರ್ಮದ ಚಿಹ್ನೆ

ಆಚರಿಸಬೇಕು. ತನ್ನ ಧರ್ಮದಲ್ಲಿ ನಿಷ್ಠೆ ಎಂದರೆ ಇತರ ಧರ್ಮಗಳನ್ನು ಹಳಿಯಬೇಕೆಂದಲ್ಲ. ಅವರವರ ಧರ್ಮದಲ್ಲೇ ಅವರವರ ಶ್ರೇಯಸ್ಸು ಅಡಗಿದೆ. ಸ್ವಧರ್ಮದಲ್ಲಿ ನಿಧನವೂ ಶ್ರೇಯಸ್ಸು. ಎಲ್ಲ ಧರ್ಮಗಳೂ ವಿವಿಧ ಪಥಗಳು, ಗುರಿ ಒಂದೇ. ಧರ್ಮಾಚರಣೆ ಸಾಧಕನಿಗೆ ಭಗವಂತನನ್ನು ಸೇರಲು ಒಂದು ಮಾರ್ಗವೇ ಹೊರತು ಅದೇ ಗುರಿಯಲ್ಲ. ಎಲ್ಲ ನದಿಗಳೂ ಕಡೆಗೆ ಸೇರುವುದು ಸಾಗರವನ್ನೇ. ಆ ಸಾಗರದಲ್ಲಿ ಇದು ಹಿಂದೂ ನದಿ, ಇದು ಇಸ್ಲಾಂ ನದಿ, ಇದು ಕ್ರೈಸ್ತ ನದಿ, ಇದು ಬೌದ್ಧ ನದಿ ಎಂದು ವಿಂಗಡಿಸಿ ಹೇಳಲು ಸಾಧ್ಯವೇ? ಆದ್ದರಿಂದ ಧರ್ಮದ ವಿಷಯದಲ್ಲಿ ಕಲಹ ಖಂಡಿತ ಕೂಡದು. ಅವರವರ ಧರ್ಮ ಅವರಿಗೆ ಶ್ರೇಯಸ್ಕರ ಹಾಗೂ ಅನುಸರಣೀಯ. ಪ್ರಪಂಚದಲ್ಲಿ ಹುಟ್ಟಿರುವ ಎಲ್ಲ ಮಾನವರೂ ಭಗವಂತನ ಊರನ್ನು ಸೇರಲು ಹೊರಟಿರುವ ಪ್ರಯಾಣಿಕರು. ಅವರವರಿಗೆ ಅನುಕೂಲವಾದ, ಅನುಸರಿಸಲು ಸುಲಭವೆನಿಸುವ ಮಾರ್ಗದಲ್ಲಿ ಸಾಗಲಿ. ಗುರಿಸೇರುವುದು ಮುಖ್ಯ. ಹಾದಿಯಲ್ಲಿ ಈ ಪ್ರಯಾಣಿಕರಲ್ಲಿ ಪರಸ್ಪರ ಕಲಹಗಳುಂಟಾಗಿ ನಾನು ಹೆಚ್ಚು ನೀನು ಹೆಚ್ಚು ಎಂಬ ಭೇದ ಭಾವ ಉಂಟಾಗಿಬಿಟ್ಟರೆ ಅವರು ಮಾನವೀಯತೆಯನ್ನೇ ಕಳೆದುಕೊಂಡು ದಾನವರಾಗುತ್ತಾರೆ. ಆದ್ದರಿಂದ ಹಾಗಾಗಲು ಬಿಡದೆ ಮಾನವರನ್ನು ಮಾನವರೆಂಬ ನೆಲೆಯಲ್ಲೇ ಗೌರವಿಸಬೇಕು. ಪರಸ್ಪರ ಸೋದರ ಭಾವನೆಯನ್ನು ಹೊಂದಿರಬೇಕೆಂದು ಪವಿತ್ರ ಕುರಾನ್ ಆಜ್ಞಾಪಿಸುತ್ತದೆ.

ಈ ಮೇಲ್ಕಂಡ ವಿಷಯಗಳಲ್ಲದೆ ಕುರಾನಿನಲ್ಲಿ ಇನ್ನೂ ಅನೇಕ ಉತ್ತಮ ಉದಾತ್ತ ವಿಚಾರಗಳು ಬರುತ್ತವೆ. ಅವುಗಳಲ್ಲಿ ಮುಖ್ಯವಾದ ಕೆಲವು ಬೋಧನೆಗಳನ್ನು ಇಲ್ಲಿ ಸ್ಮರಿಸೋಣ.

(i) **ನಾಮಸ್ಮರಣೆ** : "ನಿಮ್ಮ ಪ್ರಭುವಿನ ನಾಮವನ್ನೇ ಸ್ಮರಿಸುತ್ತಲಿರಿ, ಮತ್ತು ಎಲ್ಲರಿಂದಲೂ ಬೇರ್ಪಟ್ಟು ಕೇವಲ ಅವನಿಗೆ ಸೇರಿದವರಾಗಿರಿ. ಅವನ ಹೊರತು ಇನ್ನಾವ ಆರಾಧ್ಯನೂ ಇಲ್ಲ."

(ii) **ಆರಾಧನಾಲಯಗಳು** : "ಯಾರು ದೇವನ ಆರಾಧನಾಲಯಗಳಲ್ಲಿ ಅವನ ನಾಮಸ್ಮರಣೆಯನ್ನು ತಡೆಯಲು ಮತ್ತು ಅವುಗಳನ್ನು ಹಾಳುಗೆಡಹಲು ಉದ್ಯುಕ್ತರಾಗಿರುವರೋ ಅವರಿಗಿಂತ ದೊಡ್ಡ ಅಕ್ರಮಿ ಇನ್ನಾರಿರಬಹುದು? ಅಂತಹವರು ಈ ಆರಾಧನಾಲಯಗಳಲ್ಲಿ ಕಾಲಿರಿಸಲೂ ಅರ್ಹರಲ್ಲ, ಅವರಿಗೆ ಇಹದಲ್ಲಿ ಅಪಮಾನವೂ ಪರದಲ್ಲಿ ಘೋರ ಶಿಕ್ಷೆಯೂ ಕಾದಿದೆ." (೨:೧೧೪) ಇಸ್ಲಾಂ ಧರ್ಮದಲ್ಲಿ ಅಕ್ರಮಿ ಎಂದರೆ ಮನುಷ್ಯರ ಮೇಲೆ ಅಕ್ರಮವೆಸಗುವವರು ಮಾತ್ರವಲ್ಲ, ಸತ್ಯ ಮತ್ತು ಸತ್ಯಸಂಧತೆಯ ಮೇಲೆ ಅಕ್ರಮವೆಸಗುವವರೂ ಅಕ್ರಮಿಗಳು.

(iii) **ಅಪರಾಧ** : ಬಂದೂಕಿನ ಸಂಸ್ಕೃತಿ, ರಕ್ತಪಾತ, ಕ್ರೌರ್ಯ ಮತ್ತು ನಿರಪರಾಧಿಗಳ ಮೇಲೆ ಕೈ ಎತ್ತುವುದನ್ನು ಅಪರಾಧ ಎಂದು ಇಸ್ಲಾಂ ಧರ್ಮ ಪರಿಗಣಿಸುತ್ತದೆ.

(iv) **ಅತಿಕ್ರಮ** : ಇಸ್ಲಾಂ ಯಾವುದೇ ರೀತಿಯ ಹಿಂಸೆ, ದೌರ್ಜನ್ಯ ಮತ್ತು ಭಯೋತ್ಪಾದನೆಗೆ ಅನುಮತಿ ನೀಡುವುದಿಲ್ಲ. "ನಿಮ್ಮೊಡನೆ ಯುದ್ಧ ಮಾಡುವವರ ಜೊತೆ ನೀವೂ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ಆದರೆ ಅತಿಕ್ರಮವೆಸಗಬೇಡಿ, ಅಲ್ಲಾಹನು ಅತಿಕ್ರಮ ಎಸಗುವವರನ್ನು ಮೆಚ್ಚುವುದಿಲ್ಲ." (೨:೧೯೦)

(v) **ನಿರಪರಾಧಿಗಳ ಹತ್ಯೆ** : ಇಸ್ಲಾಂ ನಿರಪರಾಧಿಗಳ ಹತ್ಯೆಯನ್ನು ವಿರೋಧಿಸುತ್ತದೆ. ಇದರ ದೃಷ್ಟಿಯಲ್ಲಿ ಒಬ್ಬ ವ್ಯಕ್ತಿಯ ಕೊಲೆ ಇಡೀ ಮಾನವ ಕುಲದ ಕೊಲೆಗೆ ಸಮಾನವಾಗಿದೆ. "ಯಾರಾದರೂ ಒಬ್ಬ ಮಾನವನನ್ನು ವಧಿಸಿದರೆ ಅವನು ಸಕಲ ಮಾನವಕೋಟಿಯನ್ನು ವಧಿಸಿದಂತೆ ಮತ್ತು ಒಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವ ಕೋಟಿಗೆ ಜೀವದಾನ ಮಾಡಿದಂತೆ" (೫:೩೨).

(vi) **ಅಹಂಕಾರ ದರ್ಪ ಸಲ್ಲದು** : "ಭೂಮಿಯ ಮೇಲೆ ದರ್ಪದಿಂದ ನಡೆಯಬೇಡಿರಿ. ನೀವು ಭೂಮಿಯನ್ನು ಸೀಳಲಾರಿರಿ ಮತ್ತು ಪರ್ವತಗಳ ಶಿಖರಕ್ಕೂ ತಲುಪಲಾರಿರಿ."

(vii) **ಕ್ಷಮೆ ಮತ್ತು ಉತ್ತಮ ವರ್ತನೆ** : "ನಿನ್ನಿಂದ ಸಂಬಂಧ ಕಡಿದವರೊಂದಿಗೆ ನೀನು ಸಂಬಂಧ ಸ್ಥಾಪಿಸು, ನಿನಗೆ ಅನ್ಯಾಯ ಮಾಡಿದವರನ್ನು ಕ್ಷಮಿಸಿಬಿಡು ಮತ್ತು ನಿನ್ನೊಡನೆ ಕೆಟ್ಟ ವರ್ತನೆ ಮಾಡಿದವರೊಂದಿಗೆ ನೀನು ಉತ್ತಮವಾಗಿ ವರ್ತಿಸು."

(viii) **ಹಕ್ಕುಗಳ ಸಂರಕ್ಷಣೆ** : ಇಸ್ಲಾಂ ವ್ಯಕ್ತಿಗಳ ಹಕ್ಕುಗಳ ಸಂರಕ್ಷಣೆಯ ಹೊಣೆಯನ್ನು ಸರಕಾರದ ಮೇಲೆ ಇರಿಸುತ್ತದೆ. ಜಾತಿಧರ್ಮಗಳ ಭೇದವಿಲ್ಲದೆ ತನ್ನ ನಾಗರಿಕರ ರಕ್ಷಣೆ ಮಾಡುವುದು ಸರಕಾರದ ಕರ್ತವ್ಯವಾಗಿದೆ.

(ix) **ನೈತಿಕ ಹೊಣೆ ಹಾಗೂ ಕರ್ಮಫಲ** : ಪ್ರತಿಯೊಬ್ಬ ಮಾನವನ ಸೌಭಾಗ್ಯ ದೌರ್ಭಾಗ್ಯಗಳು, ಅಂತಿಮ ಪರಿಣಾಮವಾಗಿ ಅವನಿಗೆ ಒದಗುವ ಒಳಿತು ಕೆಡುಕುಗಳ ಕಾರಣಗಳು ಸ್ವತಃ ಅವನ ವ್ಯಕ್ತಿತ್ವದಲ್ಲೇ ಅಡಕವಾಗಿವೆ (೮೭:೧೩). ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಶಾಶ್ವತವಾದ ನೈತಿಕ ಹೊಣೆಯನ್ನು ಹೊಂದಿದ್ದಾನೆ. ಸನ್ಮಾರ್ಗ ಹಿಡಿದವನಿಗೆ ಒಳಿತೂ ಪಥಭ್ರಷ್ಟನಿಗೆ ವಿಪತ್ತೂ ಉಂಟಾಗುತ್ತವೆ. ಅವರವರ ಕರ್ಮಗಳ ಫಲಗಳು ಅವರವರಿಗೆ ಮಾತ್ರ ದೊರಕುವಂತಹುದು. ಇತರರು ಅವಕ್ಕೆ ಹೊಣೆಗಾರರಾಗಲಾರರು. ಆದ್ದರಿಂದ ಒಬ್ಬ ವ್ಯಕ್ತಿಯ ಸತ್ಕರ್ಮಗಳನ್ನು ಸದಾ ಮಾನ್ಯ ಮಾಡಲಾಗುವುದು. ಪರಲೋಕ ವಿಜಯಕ್ಕಾಗಿ ಅವನು ಎಷ್ಟು ಪ್ರಯತ್ನಗಳನ್ನು ಮಾಡಿರುವನೋ ಅದಕ್ಕನುಗುಣವಾಗಿ ಅವನಿಗೆ ಪ್ರತಿಫಲಪ್ರಾಪ್ತಿಯಾಗುತ್ತದೆ. ಅವನು ನಿಜವಾಗಿಯೂ ಸತ್ಯವಿಶ್ವಾಸಿಯಾಗಿದ್ದರೆ ಅವನ ಪ್ರತಿಯೊಂದು ಪ್ರಯತ್ನವೂ ಕೃತಾರ್ಥವಾಗುವುದು.

(x) **ಲೌಕಿಕ ಸುಖ**: ಲೌಕಿಕ ಸುಖ ಭೋಗಗಳು ಕ್ಷಣಿಕವಾದುವು. ಕೊನೆಗೆ ಉಳಿಯುವುದು ಬರಿಯ ವೇದನಾತ್ಮಕ ಯಾತನೆ. ಆದ್ದರಿಂದ ಹೃದಯದ ಶ್ರೀಮಂತಿಕೆಯೇ ಶ್ರೀಮಂತಿಕೆ. ಅತ್ಯಂತ ಸುಖವಿರುವುದು ದೈವಭಕ್ತಿಯಲ್ಲಿ.

(xi) **ಸಾಲ-ಮರುಪಾವತಿ** : ಸಾಲ ಮರುಪಾವತಿ ಮಾಡಲಾಗದ ಸ್ಥಿತಿಯಲ್ಲಿರುವ ಸಾಲಗಾರನಿಗೆ ಇನ್ನಷ್ಟು ಕಾಲಾವಕಾಶ ನೀಡುವಂತೆ ಸಾಲ ನೀಡಿದವರನ್ನು ಇಸ್ಲಾಮಿ ನ್ಯಾಯಾಲಯ ಒತ್ತಾಯಿಸಬಹುದು. ಆದರೆ ಒಬ್ಬ ವ್ಯಕ್ತಿಯ ವಾಸದ ಮನೆ, ಅಡುಗೆಯ ಪಾತ್ರೆಗಳು, ಉಡುವ ಬಟ್ಟೆ ಮತ್ತು ಉಪಜೀವನಕ್ಕಾಗಿ ಬಳಸುವ ಸಲಕರಣೆಗಳನ್ನು ಎಂತಹ ಪರಿಸ್ಥಿತಿಯಲ್ಲೂ ವಶಪಡಿಸಿಕೊಳ್ಳುವಂತಿಲ್ಲ (೨:೨೮೦).

(xii) **ನೆರಳು-ನಮನ** : ದೇವರು ಸೃಷ್ಟಿಸಿರುವ ಪ್ರತಿಯೊಂದು ವಸ್ತುವಿನ ನೆರಳು ಆದರ ಎಡಕ್ಕೂ ಬಲಕ್ಕೂ ಬೀಳುತ್ತಾ ಸದಾಕಾಲ ಅವನಿಗೇ ಎರಗುತ್ತಿರುತ್ತದೆ. ಹೀಗೆ ಎಲ್ಲ ಜೀವಿಗಳೂ ದೇವನಿಗೆ ಸಾಷ್ಟಾಂಗವೆರಗುತ್ತಲೇ ಇರುತ್ತವೆ.

ಕುರಾನಿನ ಪರಮೋದ್ದೇಶ ಸನ್ಮಾರ್ಗದರ್ಶನ. ಆಧ್ಯಾತ್ಮಿಕ ಪ್ರಗತಿ ಸಾಧಿಸುವ ಕಾರ್ಯಗಳಲ್ಲಿ ನಿರತನಾಗಿ ಮನುಷ್ಯ ಅತ್ಯುತ್ತಮ ನೆನಿಸಿಕೊಳ್ಳಬೇಕು. ಹೃದಯದ ಶ್ರೀಮಂತಿಕೆಯನ್ನು ಬೆಳೆಸಿಕೊಳ್ಳಬೇಕು. ಸುಳ್ಳು, ಮದ್ಯಪಾನ ಮುಂತಾದ ಘೋರ ಕೆಡಕುಗಳಿಗೆ ಬಲಿಯಾಗದೆ ಶುದ್ಧ ಪವಿತ್ರ ಜೀವನ ನಡೆಸಬೇಕು. ಇದೇ ಪ್ರಪಂಚದ ಎಲ್ಲ ಧರ್ಮಗಳೂ ಸಾರುತ್ತಿರುವ ಅಮರ ಸಂದೇಶ. ಆದ್ದರಿಂದ ಮೂಲಭೂತವಾದವನ್ನು ತೊರೆದು ಧರ್ಮಗಳ ಮೂಲಭೂತ ತತ್ತ್ವಗಳನ್ನು ಪಾಲಿಸಿದಾಗ ಧರ್ಮಗಳ ಹೆಸರಿನಲ್ಲಿ ನಡೆಯುವ ರಕ್ತಪಾತವನ್ನು ನಿಲ್ಲಿಸಬಹುದು. ◆